# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 3086/10/31/2020(SB–3)**

**ದಿನಾಂಕ: 01–07–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

**ಶ್ರೀಮತಿ ಶಬಾನ ಬಾನು ಕೋಂ ಅಯೂಬ್ ಖಾನ್**
**ನಂ. 30, 1ನೇ ಮುಖ್ಯರಸ್ತೆ, 10ನೇ ಕ್ರಾಸ್,**
**ವಾಲ್ಮೀಕಿ ನಗರ, ಬೆಂಗಳೂರು**

**ಆದೇಶ**

ಶ್ರೀಮತಿ ಶಬಾನ ಬಾನು ರವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದಿನಾಂಕ:16.09.2020 ರಂದು ದೂರು ಸಲ್ಲಿಸಿರುವ ದೂರಿನ ಸಾರಾಂಶವೇನೆಂದರೇ ದಿನಾಂಕ:13.09.2020 ರಂದು ವಿಜಯನಗರ ಪೊಲೀಸ್ ಠಾಣೆಯ ಪೊಲೀಸರು ಅವರ ಮಗ ಸಲ್ಮಾನ್‌ಖಾನ್‌ನ ಮೇಲೆ ಯಾವುದೇ ಕೇಸು ದಾಖಲಾಗದಿದ್ದರೂ ಸಹ ಅವರ ಮನೆಯವರಿಗೆ ಯಾವುದೇ ಮಾಹಿತಿಯನ್ನು ನೀಡದೇ, ಸಲ್ಮಾನ್‌ಖಾನ್‌ನನ್ನು ಠಾಣೆಗೆ ಕರೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿಟ್ಟುಕೊಂಡು, ಮೊಬೈಲ್‌ಗಳನ್ನು ಯಾರಿಗೆ ಮಾರಾಟ ಮಾಡಿದ್ದೀಯಾ ಎಂದು ಮಾನಸಿಕ ಹಿಂಸೆ ನೀಡಿರುತ್ತಾರೆಂದು ಹೇಳಿರುತ್ತಾರೆ. ನಂತರ ದೂರುದಾರರ ಪತಿಯಾದ ಅಯೂಬ್ ಖಾನ್ ರವರಿಗೆ ಫೋನ್ ಮಾಡಿ 17 ಫೋನ್‌ಗಳನ್ನು ತಂದು ಕೊಟ್ಟರೆ ಸರಿ ಇಲ್ಲದಿದ್ದಲ್ಲಿ ಅಯೂಬ್ ಖಾನ್ ರವರ ಮೇಲೆಯೂ ಸಹ ಕೇಸು ದಾಖಲಿಸುವುದಾಗಿ ಬೆದರಿಕೆ ಹಾಕಿದ್ದು, ಅಯೂಬ್ ಖಾನ್‌ರವರು ಪೊಲೀಸರಿಗೆ ಹೆದರಿ ರೂ.50,000/– ಬೆಲೆ ಬಾಳುವ 17 ಮೊಬೈಲ್ ಫೋನ್‌ಗಳನ್ನು ಖರೀದಿ ಮಾಡಿ ಕೊಟ್ಟಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ವಿಜಯನಗರ ಪೊಲೀಸ್ ಠಾಣೆಯ ಪೊಲೀಸರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ದೂರರ್ಜಿಯ ಬಗ್ಗೆ ವಿಚಾರಣೆ ನಡೆಸಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರಿಗೆ ಆದೇಶಿಸಲಾಗಿದ್ದು, ಅದರಂತೆ ಆಯೋಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರು ಡಿವೈಎಸ್ಪಿ ಶ್ರೀ ಮಂಜುನಾಥ್ ರವರಿಂದ ವಿಚಾರಣೆ ಮಾಡಿಸಿ ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿಯಲ್ಲಿ, ಮಾನ್ಯ

ಆಯೋಗದ ಆದೇಶದ ಮೇರೆಗೆ ದಿನಾಂಕ:16.09.2020 ರಂದು ಸಂಜೆ ಸುಮಾರು 04.15 ಗಂಟೆಗೆ ಅರ್ಜಿದಾರರಾದ ಶ್ರೀಮತಿ ಶಬಾನ ಬಾನು ರವರೊಂದಿಗೆ ವಿಜಯನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲಿಸಲಾಗಿ, ಅರ್ಜಿದಾರರು ತಮ್ಮ ದೂರಿನಲ್ಲಿ ನಮೂದಿಸಿರುವ ಅರ್ಜಿದಾರರ ಮಗ ಸಲ್ಮಾನ್‌ಖಾನ್ ರವರು ಠಾಣಾ ಲಾಕಪ್‌ನಲ್ಲಿ ಕಂಡು ಬಂದಿರುವುದಿಲ್ಲ. ನಂತರ ಠಾಣಾ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅರ್ಜಿದಾರರ ಮಗ ಸಲ್ಮಾನ್‌ಖಾನ್‌ರವರನ್ನು ಪಿಎಸ್‌ಐ ಶ್ರೀ ಸಂತೋಷ್ ರವರು ಠಾಣಾ ಮೊ.ಸಂ:192/2020 ಕಲಂ 392, 411 ಐಪಿಸಿ ಪ್ರಕರಣದಲ್ಲಿ ದಸ್ತಗಿರಿ ಪಡಿಸಿದ್ದು, ಮುಂದಿನ ತನಿಖೆಗಾಗಿ ಹಾಗೂ ವೈದ್ಯಕೀಯ ಪರೀಕ್ಷೆಗಾಗಿ ಕರೆದುಕೊಂಡು ಹೋಗಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ಅರ್ಜಿದಾರರಾದ ಶ್ರೀಮತಿ ಶಬಾನ ಬಾನು ಅವರ ಗಂಡ ಅಯೂಬ್‌ಖಾನ್ ಹಾಗೂ ಅವರ ಮಗ ಸಲ್ಮಾನ್‌ಖಾನ್ (ಸಂತ್ರಸ್ತ/ನೊಂದ ವ್ಯಕ್ತಿ) ರವರ ಹೇಳಿಕೆಯನ್ನು ಪರಿಶೀಲಿಸಲಾಗಿ, ದಿ:13.09.2020 ರಂದು ಬೆಳಗ್ಗೆ 09.30 ಗಂಟೆಗೆ ಟಿಪ್ಪುನಗರದಲ್ಲಿ ಸಲ್ಮಾನ್‌ಖಾನ್‌ರವರು ಫಿಶ್‌ಗಾಡಿ ಇಟ್ಟುಕೊಂಡು ಫಿಶ್ ಮಾರಾಟ ಮಾಡುತ್ತಿದ್ದಾಗ ವಿಜಯನಗರ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ಸಂತೋಷ್ ಮತ್ತು ಶ್ರೀ ಶ್ರೀನಿವಾಸಮೂರ್ತಿ ಎಂಬುವರು ಬಂದು ಯಾರಿಗೂ ವಿಚಾರ ತಿಳಿಸದೇ ವಿಜಯನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ದಿನಾಂಕ:14.09.2020ರಂದು ಸಂಜೆ ದೂರುದಾರರ ಪತಿಯವರಿಗೆ ಪೋನ್ ಮಾಡಿಸಿ ಮೊಬೈಲ್‌ಗಳನ್ನು ತಂದು ಕೊಡುವಂತೆ ಸಲ್ಮಾನ್‌ಖಾನಿಗೆ ಹೊಡೆದಿರುತ್ತಾರೆ. ನಂತರ ಅಯೂಬ್ ಖಾನ್ ರವರು ಬರ್ಮಾ ಬಜಾರ್‌ನಲ್ಲಿ ರೂ. 62,000/– ಮೌಲ್ಯದ 16 ಸೆಕೆಂಡ್ ಹ್ಯಾಂಡ್ ಮೊಬೈಲ್‌ಗಳನ್ನು ಖರೀದಿಸಿ, ದಿನಾಂಕ:15.09.2020 ರಂದು ಅವರ ಪರಿಚಯಸ್ಥರಾದ ಶ್ರೀ ಫಕ್ರುದ್ದೀನ್ ಬಾಷಾ ರವರ ಕೈಯಲ್ಲಿ ಠಾಣೆಗೆ ಕಳುಹಿಸಿ ಕೊಟ್ಟಿದ್ದು, ಕೊಟ್ಟ ನಂತರವೂ ಸಹ ದಿನಾಂಕ:16.09.2020 ರಂದು ವಿಜಯನಗರ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ ಠಾಣೆಯಲ್ಲಿಟ್ಟು ಕೊಂಡಿರುತ್ತಾರೆ. ದಿನಾಂಕ:17.09.2020 ರಂದು ವೈದ್ಯಕೀಯ ಪರೀಕ್ಷೆ ಮಾಡಿಸಿದ ಸಮಯದಲ್ಲಿ ಸಲ್ಮಾನ್ ಖಾನ್‌ರವರಿಗೆ ಕರೋನಾ ಇರುವುದಾಗಿ ಹೇಳಿ ಠಾಣೆಯಲ್ಲಿಟ್ಟುಕೊಂಡು ದಿನಾಂಕ:18.09.2020 ರಂದು ಅವರನ್ನು ಕರೋನಾ ಸೆಂಟರ್‌ಗೆ ಬಿಟ್ಟಿರುತ್ತಾರೆ. ದಿನಾಂಕ:28.09.2020 ರಂದು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ಮನೆಗೆ ಬಂದಿರುವುದಾಗಿ ಹಾಗೂ ಬೇರೆ ಬೇರೆ ಪೊಲೀಸರು ಸಹ ಪದೇ ಪದೇ ಮನೆಯ ಬಳಿ ಬಂದು ತೊಂದರೆ ಕೊಡುತ್ತಿದ್ದು, ಮನೆಯಲ್ಲಿದ್ದ ಸಿಸಿಟಿವಿ ಹಾರ್ಡ್‌ಡಿಸ್ಕ್ ಅನ್ನು ಎತ್ತಿಕೊಂಡು ಹೋಗಿರುತ್ತಾರೆಂದು ವಿಚಾರಣಾ ಕಾಲದಲ್ಲಿ ನೀಡಿದ ಹೇಳಿಕೆಯಿಂದ ಕಂಡು ಬಂದಿದ್ದು, ಅವರ ಹೇಳಿಕೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ವಿಜಯನಗರ ಪೊಲೀಸ್ ಠಾಣೆಯ ಅಧಿಕಾರಿ/ಸಿಬ್ಬಂದಿಯವರ ಹೇಳಿಕೆಗಳು ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅರ್ಜಿದಾರರಾದ ಶ್ರೀಮತಿ ಶಬಾನ ಬಾನು ರವರ ಮಗ ಹಾಗೂ ಪ್ರಕರಣದ ನೊಂದ ವ್ಯಕ್ತಿಯಾದ ಸಲ್ಮಾನ್‌ಖಾನ್‌ನನ್ನು ವಿಜಯನಗರದ ಪೊಲೀಸರು ಕಳ್ಳತನದ ಮೊಬೈಲ್‌ಗಳನ್ನು ಸ್ವೀಕರಿಸಿರುವ ವಿಚಾರದಲ್ಲಿ ವಿಚಾರಣೆಗಾಗಿ ದಿನಾಂಕ:14.09.2020 ರಂದು ಬೆಳಗ್ಗೆ ಸುಮಾರು 10.00 ಗಂಟೆಗೆ ಠಾಣೆಗೆ ಕರೆತಂದು ವಿಚಾರಣೆ ಮಾಡಿದ ಸಮಯದಲ್ಲಿ ಠಾಣಾ ಮೊ.ಸಂ 192/2020 ಕಲಂ 392, 411 ಐಪಿಸಿ ಪ್ರಕರಣದಲ್ಲಿ ಭಾಗಿಯಾಗಿರುವುದು ತಿಳಿದು ಬಂದಿದ್ದು, ಹೆಚ್ಚಿನ ವಿಚಾರಣೆ ಮಾಡಬೇಕಾಗಿದ್ದರಿಂದ ದಿನಾಂಕ:14.09.2020 ಮತ್ತು 15.09.2020 ರಂದು ವಿಚಾರಣೆಗೆ ಹಾಜರಾಗಲು ಸೂಚಿಸಿ, ಪೊಲೀಸ್ ನೋಟೀಸ್ ಜಾರಿ ಮಾಡಿ ಕಳುಹಿಸಿ ಕೊಡಲಾಗಿರುತ್ತದೆ. ದಿನಾಂಕ:16.09.2020 ರಂದು ಬೆಳಗ್ಗೆ:9.40 ಗಂಟೆಗೆ ಅರ್ಜಿದಾರರ ಮಗ ಸಲ್ಮಾನ್‌ಖಾನ್ ರವರು ವಿಜಯನಗರ ಪೊಲೀಸ್ ಠಾಣೆಗೆ ಖುದ್ದು ವಿಚಾರಣೆಗೆ ಹಾಜರಾಗಿದ್ದು, ಆತನನ್ನು ವಿಚಾರಣೆ ಮಾಡಿದ ಸಮಯದಲ್ಲಿ ಕಳ್ಳತನ ಮಾಡಿದ ಮೊಬೈಲ್‌ಗಳನ್ನು ಸ್ವೀಕರಿಸಿರುವುದಾಗಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದ್ದು, ಆತನನ್ನು ಅದೇ ದಿನ ಮಧ್ಯಾಹ್ನ ಸುಮಾರು 02.30 ಗಂಟೆಗೆ ದಸ್ತಗಿರಿಪಡಿಸಿ, ದಸ್ತಗಿರಿ ಮಾಹಿತಿಯನ್ನು ಅವರ ಪರಿಚಯಸ್ಥರಾದ ಶ್ರೀ ಜಹೀರ್ ಎಂಬುವವರಿಗೆ ನೀಡಿದ್ದು, ನಂತರ ಆತನಿಂದ ಸುಮಾರು 100 ಮೊಬೈಲ್‌ಗಳನ್ನು ಅಮಾನತ್ತು ಮಾಡಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ:135/2020 ರಲ್ಲಿ ನಮೂದಿಸಿದ್ದು, ದಿನಾಂಕ:17.09.2020 ರಂದು ಆರೋಪಿ ಸಲ್ಮಾನ್‌ಖಾನ್‌ನನ್ನು ಜಿಟ್ಸಿ ಮೀಟ್ ಆಪ್ ಮುಖಾಂತರ ಮಾನ್ಯ ನ್ಯಾಯಧೀಶರ ಮುಂದೆ ಹಾಜರುಪಡಿಸಿದ್ದು, ನಂತರ ಆತನಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಿದ ಸಮಯದಲ್ಲಿ ಆತನಿಗೆ ಕರೋನಾ ಇದ್ದ ಪ್ರಯುಕ್ತ ಆತನನ್ನು ದಿನಾಂಕ:18.09.2020 ರಂದು ಬಸವೇಶ್ವರ ನಗರದಲ್ಲಿರುವ ಯುನಾನಿ ಕೋವಿಡ್ ಸೆಂಟರ್‌ಗೆ ಕಳುಹಿಸಿಕೊಟ್ಟಿರುವು ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ಅರ್ಜಿದಾರರು ಹಾಗೂ ಪ್ರಕರಣದ ನೊಂದ ವ್ಯಕ್ತಿ ಸಲ್ಮನ್‌ಖಾನ್ ರವರು ತಮ್ಮ ಹೇಳಿಕೆಯಲ್ಲಿ ವಿಜಯನಗರ ಪೊಲೀಸ್ ಠಾಣೆಯ ಪೊಲೀಸರು ದಿನಾಂಕ:13.09.2020 ರಂದು ಠಾಣೆಗೆ ಕರೆದುಕೊಂಡು ಹೋಗಿ ದಿನಾಂಕ:16.09.2020 ರವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿಟ್ಟುಕೊಂಡಿದ್ದಾಗಿ ತಿಳಿಸಿದ್ದು, ಅರ್ಜಿದಾರರ ಪರಿಚಯಸ್ಥ ಹಾಗೂ ಪ್ರತ್ಯಕ್ಷದರ್ಶಿಯಾದ ಶ್ರೀ ಫಕ್ರದ್ದೀನ್ ಬಾಷಾ ರವರು ದಿನಾಂಕ:13.09.2020 ಮತ್ತು ದಿನಾಂಕ:14.09.2020 ರಂದು ಸಂಜೆ ಸುಮಾರು 04.30 ಗಂಟೆಗೆ ವಿಜಯನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಮಯದಲ್ಲಿ ಅರ್ಜಿದಾರರ ಮಗ ಸಲ್ಮಾನ್‌ಖಾನ್ ಠಾಣೆಯಲ್ಲಿದ್ದುದ್ದನ್ನು ನೋಡಿ ಮಾತನಾಡಿಸಿರುವುದಾಗಿ ತಮ್ಮ

ಹೇಳಿಕೆಯಲ್ಲಿ ತಿಳಿಸಿರುವುದು ಕಂಡು ಬಂದಿರುತ್ತದೆಂದು ಅಭಿಪ್ರಾಯದ ವರದಿಯನ್ನು ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿದ್ದು, ದೂರುದಾರರಿಂದ ಅಭಿಪ್ರಾಯ ಬಂದಿರುವುದಿಲ್ಲ. ಆದರೆ ನೋಟಿಸು ಜಾರಿಯಾದ ಸ್ವೀಕೃತಿ ಬಂದಿರುತ್ತದೆ.

ದೂರು, ವರದಿ ಹಾಗೂ ವರದಿಗೆ ಲಗತ್ತಿಸಿರುವ ಹೇಳಿಕೆಗಳನ್ನು ಪರಿಶೀಲಿಸಲಾಗಿ, ದೂರುದಾರರ ಮಗನಾದ ಸಲ್ಮಾನ್‌ಖಾನ್ ರವರು ಫಿಶ್ ಮಾರಾಟ ಮಾಡುತ್ತಿದ್ದಾಗ ಸಲ್ಮಾನ್‌ಖಾನ್ ರವರನ್ನು ವಿಜಯನಗರ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ಸಂತೋಷ್ ಮತ್ತು ಶ್ರೀ ಶ್ರೀನಿವಾಸ್‌ಮೂರ್ತಿ ರವರು ದಿನಾಂಕ:13.09.2020 ರಂದು ವಿಜಯನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದಿನಾಂಕ:16.09.2020 ರವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿಟ್ಟುಕೊಂಡಿದ್ದಾಗಿ ತಿಳಿಸಿದ್ದು, ಅರ್ಜಿದಾರರ ಪರಿಚಯಸ್ಥ ಹಾಗೂ ಪ್ರತ್ಯಕ್ಷದರ್ಶಿಯಾದ ಶ್ರೀ ಫಕ್ರದ್ದೀನ್ ಬಾಷಾರವರು ದಿನಂಕ:13.09.2020 ಮತ್ತು ದಿನಾಂಕ:14.09.2020 ರಂದು ಸಂಜೆ ಸುಮಾರು 04.00 ಗಂಟೆಗೆ ವಿಜಯನಗರ ಪೊಲೀಸ್ ಠಾಣೆಗೆ ಭೇಟಿ ನೀಡಿದ ಸಮಯದಲ್ಲಿ ಅರ್ಜಿದಾರರ ಮಗ ಸಲ್ಮಾನ್‌ಖಾನ್ ಠಾಣೆಯಲ್ಲಿದುದ್ದನ್ನು ನೋಡಿ ಮಾತನಾಡಿಸಿರುವುದಾಗಿ ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆಂದು ಆಯೋಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರು ವರದಿ ಮಾಡಿರುವುದರಿಂದ ಶ್ರೀ ಸಂತೋಷ್ ಬಿ.ಹೆಚ್. ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ವಿಜಯನಗರ ಪೊಲೀಸ್ ಠಾಣೆ, ಬೆಂಗಳೂರು ಮತ್ತು ಶ್ರೀ ಶ್ರೀನಿವಾಸಮೂರ್ತಿ ಬಿ.ಕೆ, ಎಎಸ್ಐ, ಶಿವಾಜಿನಗರ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ಇವರುಗಳಿಗೆ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993, ಕಲಂ 16 ರ ಅಡಿ ನೋಟೀಸ್ ಜಾರಿ ಮಾಡಿ, ಆಯೋಗದ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದ್ದು, ದಿನಾಂಕ 17.03.2021 ರಂದು ಮೇಲೆ ಹೇಳಲಾದ ಪೊಲೀಸ್ ಅಧಿಕಾರಿಗಳು ಹಾಗೂ ದೂರುದಾರರು, ಅವರ ಪತಿಯಾದ ಶ್ರೀ ಆಯುಬ್ ಖಾನ್ ಹಾಗೂ ಮಗನಾದ ಶ್ರೀ ಸಲ್ಮಾನ್‌ಖಾನ್ ಆಯೋಗದ ಮುಂದೆ ಖುದ್ದು ಹಾಜರಾಗಿ ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ.

ಶ್ರೀ ಬಿ. ಹೆಚ್. ಸಂತೋಷ್, ಪಿ.ಎಸ್.ಐ, ವಿಜಯನಗರ ಪೊಲೀಸ್ ಠಾಣೆರವರ ಹೇಳಿಕೆಯು ಈ ಕೆಳಕಂಡಂತೆ ಇದೆ:

> "On 14.09.2020 in Vijayanagar Police station Crime No.192/2020 under Section 392 IPC, I deployed Sri Srinivasamurthy, Head constable, Sri Umesh, Head Constable, and Sri Anil, Police constable to trace out the accused persons.

They went and brought the accused persons namely Sri Mujamil Pasha, Sri Mohammed Pasha and Sri Mohammed Mubarak and produced them before me. After the interrogation of aforesaid accused persons they have disclosed that the mobiles that they robbed have been given to Sri Salman Khan. I, then, deputed Sri Somashekar, ASI and Sri Anil, Police constable to trace Sri Salman Khan. They then produced Sri Salman Khan before me. As there were three accused persons before me that day and it would be difficult to interrogate Sri Salman Khan also and because it was Covid time, I gave notice to Sri Salman Khan to appear on 15.09.2020. On 15.09.2020 Sri Salman Khan did not appear in the police station. I had again sent Sri Somashekar, ASI and Sri Anil, Police constable to bring Sri Salman Khan on 15.09.2020. I had then examined Sri Salman Khan and told him that he needs to be further interrogated and to come on 16.09.2020. On 16.09.2020. Sri Salman Khan appeared in the police station in the morning around 10 a.m. After interrogation of Sri Salman Khan, I learnt that he had received mobile phones from the accused persons stated earlier. Thereafter at 2.30 p.m., I have arrested Sri Salman Khan and intimated this to his relative by name Sri Zahir. Thereafter, as he had kept mobile phones in the house of Sri Mohammed Mubarak, I had taken him to Sri.Mohammed Mubarak's house and recovered 24 mobiles, seized those mobiles under P.F. Thereafter, I took Sri Salman Khan for medical examination and after conducting medical examination, I returned to police station at around 8.30 p.m and learnt that officials of Karnataka State Human Rights Commission had come looking for Sri Salman Khan. Thereafter on 17.09.2020 Sri Salman Khan was produced before the Magistrate through "Jitsimeet" app and it being Mahalaya Amasya, Sri Salman Khan was kept in the police station only as ordered by the Magistrate. On 18.09.2020 the medical report of Sri Salman Khan was received and it was learnt that he is Covid positive. Thereafter, as per the orders of the learned Magistrate, Sri Salman Khan was left in Basaveswaranagar Corona centre. Thereafter, during investigation, I had seized 100 mobiles from Burma Bazzar which were all received and disposed of by Sri Salman Khan. I did not call Sri Salman Khan or his father Sri.Ayub Khan demanding mobile phones or I did not beat up Sri Salman Khan. I deny that I had got signatures of Sri Salman Khan on

white blank papers and later I typed out notice dated 14.09.2020 and 15.09.2020."

ಶ್ರೀ ಶ್ರೀನಿವಾಸ್‌ಮೂರ್ತಿ(ಅಂದಿನ ಹೆಚ್.ಸಿ–5724, ವಿಜಯನಗರ ಪೊಲೀಸ್ ಠಾಣೆ) ಹಾಲಿ ಎ.ಎಸ್.ಐ, ಶಿವಾಜಿನಗರ ಟ್ರಾಫಿಕ್ ಪೊಲೀಸ್ ಠಾಣೆ ರವರ ಹೇಳಿಕೆಯು ಈ ಕೆಳಕಂಡಂತೆ ಇದೆ:

> "On 14.09.2020 in Vijayanagar Police station Crime No.89/2020 under Section 379 IPC, I had been deputed for tracing the accused and the property. On that day, through my source, I learnt about three accused persons namely Sri Mujamil Pasha, Sri Asif and Sri Mubarak and my source showed them to me. I then along with Sri Umesh, Head Constable and Sri Anil, Police Constable caught hold of the aforesaid three persons and properties and produced before Sri.B.H.Santhosh, PSI and three mobiles were also recovered from them. Accordingly, I gave a report in the police station. Thereafter, on interrogation of the aforesaid three persons by PSI, in their voluntary statements they stated that they snatched mobiles particularly from women, gave the snatched mobile phones to Sri Salman Khan through Sri Mubarak. Thereafter to trace and secure Sri Salman Khan, PSI deputed Sri Somashekar, ASI, and Sri Anil, Police Constable. I being a senior Head Constable in the police station, I had participated in the interrogation of accused named above as well as Sri Salman Khan after he was produced in the police station by Sri Somashekar and Sri Anil. Thereafter 24 mobile phones were recovered from the house of Sri Mubarak and 100 more mobiles were recovered from Burma Bazzar. I state that Sri Salman Khan was given notice on 14.09.2020 and 15.09.2020 by PSI. I state that I have not secured and produced Sri Salman Khan on 13.09.2020 and I have not beaten up Sri Salman Khan. I state that I had spoken to Sri Fakruddin Pasha on 14.09.2021 and thereafter to get the mobiles which Sri Salman Khan has taken when Sri Fakruddin Pasha spoke to me and which conversation has been recorded by Sri Fakruddin Pasha."

ದೂರುದಾರರ ಮಗನಾದ ಶ್ರೀ ಸಲ್ಮಾನ್ ಖಾನ್ (ನೊಂದ / ಬಾಧಿತ ವ್ಯಕ್ತಿ) ರವರ ಹೇಳಿಕೆಯು ಈ ಕೆಳಕಂಡಂತೆ ಇದೆ:

> "On 13.09.2020 at around 10.00 a.m. Sri Srinivasamurthy, Asst.Sub-Inspector, along with two other persons whose names I do not know, came near S.K.Function Hall, Chamarajapet, where I was selling fish on push cart. Sri Srinivasamurthy called me and asked me to sit in a car in which he along with other police persons had come. Although I refused to go, I was forced to go along with Sri Srinivasamurthy in the car. I was kept in the police station till evening, questioning about my job, etc. In the evening, I was beaten by Sri Srinivasamurthy. I was made to stay in the police station that night. On 14.09.2020 at around 12 noon Sri Srinivasamuthy called up my father's number through his mobile and made me to talk to my father to get mobile phones. I was thereafter kept in the police station all through and in the evening I used to be beaten up by Sri Srinivasamurthy. On 16.09.2020, my mother gave a complaint to Karnataka State Human Rights Commission. After Sri Srinivasamurthy got to know about the complaint lodged by my mother before the Karnataka State Human Rights Commission, he warned me to tell before the Human Rights Commission that I used to be called daily, and not kept in the police station continuously. On 16.09.2020, Sri B.H.Santhosh, Sub Inspector of police got my signature on blank white papers. On 16.09.2020 evening some of the officials from Karnataka State Human Rights Commission came along with my mother to the police station. However, before officials from Karnataka State Human Rights Commission came there, Sri B.H.Santhosh, PSI took me along other persons who were also kept in the police station away from the police station. Later, on 17.09.2020, medical examination was done and produced before the Magistrate and while producing before the Magistrate and also before the Doctor for medical examination, I was warned by PSI not to speak about my detention from 13.09.2020 and also about I being beaten up by Sri Srinivasamurthy I was told on 18.09.2020 that I, as Covid positive was sent to Corona centre. I came out of the judicial custody on 28.09.2020 and thereafter on 10.10.2020 some police persons came to my house looking for me and thereafter they have taken away the CCTV recorder from my house whose names are not known to me."

ದೂರುದಾರರ ಪತಿಯಾದ ಶ್ರೀ ಅಯುಬ್ ಖಾನ್ ರವರ ಹೇಳಿಕೆಯು ಈ ಕೆಳಕಂಡಂತೆ ಇದೆ:

"On 12.09.2020 at around 10.37 a.m., I received a call from Mobile No.9980822723 to my Mobile No.9535335583 and the speaker namely Sri Srinivasamurthy enquird about me and thereafter asked me to come to the police station on 13.09.2020 in the morning. On 13.09.2020, I wanted to deliver fish to my son in the morning, when I received a call from Sri Nizam, working with my son that the police have taken Sri Salman Khan in a car along with them. I then, called up Sri Srinivasamurthy to enquire about my son being taken on which Sri Srinivasamurthy told me that I should go to court. I had then contacted Sri Fakruddin Basha who was known to me as well as Sri Srinivasamurthy. Sri Fakrudddin Basha later told me that he has spoken to Sri Srinivasamurthy and I need not fear as Sri Salman Khan is in the police station. Thereafter on 14.09.2020, Sri Fakruddin Basha had sent from his whatsapp the conversation that had taken place between him and Sri Srinivasamurthy about the mobile phones to be given and asked me to give 200 mobile phones to Sri Srinivasamurthy. I could however, give 16 second hand mobiles which I had purchased from Burma Bazzar for Rs.62,000/-. I had also given statement before Dy.S.P. Karnataka State Human Rights Commission earlier. I am now handing over the aforesaid recordings which have been recorded in my mobile and these have been taken in a Pen Drive by the Karnataka State Human Rights Commission."

ದೂರರ್ಜಿ, ವರದಿ ಹಾಗೂ ಹೇಳಿಕೆಗಳನ್ನು ಪರಿಶೀಲಿಸಲಾಗಿ, ದಿನಾಂಕ.13.09.2020ರಂದು ದೂರುದಾರರ ಮಗನಾದ ಶ್ರೀ ಸಲ್ಮಾನ್ ಖಾನ್ ರವರು ಟಿಪ್ಪುನಗರದಲ್ಲಿರುವ ಎಂ.ಎಸ್ ಫಂಕ್ಷನ್ ಹಾಲ್ ಬಳಿ ಫಿಶ್ ಗಾಡಿ ಇಟ್ಟುಕೊಂಡು ಫಿಶ್ ಮಾರಾಟ ಮಾಡುತ್ತಿದ್ದಾಗ ಶ್ರೀ ಸಲ್ಮಾನ್ ಖಾನ್ ರವರು ವಿಜಯನಗರ ಪೊಲೀಸ್ ಠಾಣೆಯ ಪೊಲೀಸರಾದ ಶ್ರೀ ಶ್ರೀನಿವಾಸ್ ಮೂರ್ತಿ ರವರು ವಿಜಯನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದಿನಾಂಕ.13.09.2020 ರಿಂದ 16.09.2020 ರವರೆಗೆ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿಟ್ಟುಕೊಂಡಿದ್ದು, ಹಾಗೂ ಕದ್ದ ಮೊಬೈಲ್‌ಗಳನ್ನು ತಂದು ಕೊಡುವಂತೆ ಎ.ಎಸ್.ಐ ಶ್ರೀ ಶ್ರೀನಿವಾಸ್ ಮೂರ್ತಿ ರವರು ದೈಹಿಕವಾಗಿ ಹಲ್ಲೆ ನಡೆಸಿರುವುದು ಶ್ರೀ ಸಲ್ಮಾನ್‌ಖಾನ್ ಮತ್ತು ಅವರ ತಂದೆ ಶ್ರೀ ಅಯೂಬ್ ಖಾನ್ ರವರುಗಳ ಹೇಳಿಕೆಗಳಿಂದ ಕಂಡು ಬಂದಿರುತ್ತದೆ.

ದಿನಾಂಕ.16.09.2020 ರಂದು ಪಿ.ಎಸ್.ಐ ಶ್ರೀ ಬಿ.ಹೆಚ್ ಸಂತೋಷ್ ರವರು ಖಾಲಿ ಬಿಳಿ ಹಾಳೆಗಳ ಮೇಲೆ ಶ್ರೀ ಸಲ್ಮಾನ್‌ಖಾನ್ ರವರ ಸಹಿ ತಗೆದುಕೊಂಡಿದ್ದು ಹಾಗೂ ಅದೇ ದಿನ ಸಂಜೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಅಧಿಕಾರಿಗಳು ಠಾಣೆಗೆ ಆಗಮಿಸುತ್ತಿದ್ದಾರೆಂದು ತಿಳಿದು ಶ್ರೀ ಸಲ್ಮಾನ್‌ಖಾನ್ ನನ್ನು ಹಾಗೂ ಠಾಣೆಯಲ್ಲಿದ್ದ ಬೇರೆ ವ್ಯಕ್ತಿಗಳನ್ನು ಸಹ ಬೇರೆ ಕಡೆ ಕರೆದುಕೊಂಡು ಹೋಗಿರುವುದು ಶ್ರೀ ಸಲ್ಮಾನ್‌ಖಾನ್ ರವರ ಹೇಳಿಕೆಯಿಂದ ಕಂಡು ಬಂದಿರುತ್ತದೆ.

ಮುಂದುವರೆದು ಪ್ರತ್ಯಕ್ಷದರ್ಶಿಯಾದ ಶ್ರೀ ಫಕ್ರದ್ದೀನ್ ಬಾಷ ರವರು ಡಿವೈ ಎಸ್.ಪಿ ರವರ ಮುಂದೆ ನೀಡಿರುವ ಹೇಳಿಕೆಯಲ್ಲಿ ದಿನಾಂಕ.13.09.2020ರಂದು ವಿಜಯನಗರ ಪೊಲೀಸ್ ಠಾಣೆಗೆ ಹೋಗಿದ್ದಾಗ, ಠಾಣೆಯಲ್ಲಿದ್ದ ಶ್ರೀ ಸಲ್ಮಾನ್ ಖಾನ್ ರವರನ್ನು ವಿಚಾರ ಮಾಡಿದಾಗ ಆತನು ತಾನು ಯಾವ ಮೊಬೈಲ್‌ಗಳನ್ನು ಕದ್ದಿಲ್ಲವೆಂದು ತಿಳಿಸಿರುತ್ತಾನೆ. ದಿನಾಂಕ.14.09.2020 ರಂದು ಶ್ರೀ ಫಕ್ರದ್ದೀನ್ ಬಾಷ ರವರು ವಿಜಯನಗರ ಪೊಲೀಸ್ ಠಾಣೆಗೆ ಪುನ: ಭೇಟಿ ನೀಡಿದ್ದು, ಪೊಲೀಸರು ಮೊಬೈಲ್‌ಗಳನ್ನು ತಂದು ಕೊಟ್ಟರೆ ಮಾತ್ರ ಶ್ರೀ ಸಲ್ಮಾನ್ ಖಾನ್‌ನನ್ನು ಬಿಡುತ್ತೇವೆಂದು ಹೇಳಿರುವುದು ಹಾಗೂ ದಿನಾಂಕ.15.09.2020 ರಂದು ಬೆಳಿಗ್ಗೆ 11–00 ಗಂಟೆಗೆ ಮತ್ತೆ ವಿಜಯನಗರ ಪೊಲೀಸ್ ಠಾಣೆಗೆ ಹೋದಾಗ ಪಿಎಸ್ಐ ಶ್ರೀ ಸಂತೋಷ್ ಹಾಗೂ ಶ್ರೀ ಶ್ರೀನಿವಾಸ ರವರು ಠಾಣೆಯಲ್ಲಿ ಇಲ್ಲದೇ ಇದ್ದುದರಿಂದ ಶ್ರೀ ಫಕ್ರದ್ದೀನ್ ಬಾಷ ರವರು ಶ್ರೀನಿವಾಸ ರವರಿಗೆ ಫೋನ್ ಮಾಡಿ ಆ ಹುಡುಗನ ವಿಚಾರ ಏನಾಯಿತು ಎಂದು ಕೇಳಿದಾಗ ಅವರು ಸಂಜೆ ಸಾಹೇಬರು ಬಂದ ಮೇಲೆ ಮಾತನಾಡಿ ಎಂದು ಹೇಳಿರುವುದು ಹಾಗೂ ದಿನಾಂಕ.13.09.2020 ರಿಂದ 15.09.2020ರವರೆಗೂ ಶ್ರೀ ಸಲ್ಮಾನ್ ಖಾನ್ ರವರನ್ನು ಅಕ್ರಮ ಬಂಧನದಲ್ಲಿಟ್ಟಿರುವುದು ಕಂಡು ಬಂದಿರುತ್ತದೆ.

ದಿನಾಂಕ 13–09–2020 ರಿಂದ 15–09–2020 ರವರೆಗೆ ಅಂದಿನ ಹೆಚ್.ಸಿ–5724 ಶ್ರೀ ಶ್ರೀನಿವಾಸಮೂರ್ತಿ (ಹಾಲಿ ಎ.ಎಸ್.ಐ, ಶಿವಾಜಿನಗರ ಟ್ರಾಫಿಕ್ ಪೊಲೀಸ್ ಠಾಣೆ) ಹಾಗೂ ಶ್ರೀ ಬಿ.ಹೆಚ್. ಸಂತೋಷ್, ಪಿ.ಎಸ್.ಐ, ವಿಜಯನಗರ ಪೊಲೀಸ್ ಠಾಣೆ ರವರುಗಳು ಶ್ರೀ ಸಲ್ಮಾನ್ ಖಾನ್ ರವರನ್ನು ಅಕ್ರಮ ಬಂಧನದಲ್ಲಿಟ್ಟಿ ಅವರ ಮೇಲೆ ದೈಹಿಕ ಹಲ್ಲೆ ಮಾಡಿರುವುದು ವಿಚಾರಣಾ ಕಾಲದಲ್ಲಿ ಕಂಡುಬರುತ್ತದೆ ಹಾಗೂ ಕರ್ತವ್ಯ ದುರುಪಯೋಗ ಆಗಿರುವುದು ಸಾಬೀತಾಗಿರುತ್ತದೆ. ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

> ದೂರರ್ಜಿದಾರರಾದ ಶ್ರೀಮತಿ ಶಬಾನ ಬಾನು ರವರ ಮಗನಾದ ಶ್ರೀ ಸಲ್ಮಾನ್ ಖಾನ್ (ನೊಂದ ವ್ಯಕ್ತಿ) ರವರಿಗೆ ರೂ. 10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ

ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಶ್ರೀ ಬಿ.ಹೆಚ್. ಸಂತೋಷ್, ಪಿ.ಎಸ್.ಐ, ವಿಜಯನಗರ ಪೊಲೀಸ್ ಠಾಣೆ ಹಾಗೂ ಅಂದಿನ ವಿಜಯನಗರ ಪೊಲೀಸ್ ಠಾಣೆಯ ಹೆಚ್.ಸಿ–5724 ಶ್ರೀ ಶ್ರೀನಿವಾಸಮೂರ್ತಿ (ಹಾಲಿ ಎ.ಎಸ್.ಐ, ಶಿವಾಜಿನಗರ ಟ್ರಾಫಿಕ್ ಪೊಲೀಸ್ ಠಾಣೆ) ರವರುಗಳ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಶ್ರೀ ಬಿ.ಹೆಚ್. ಸಂತೋಷ್, ಪಿ.ಎಸ್.ಐ, ವಿಜಯನಗರ ಪೊಲೀಸ್ ಠಾಣೆ ಹಾಗೂ ಅಂದಿನ ವಿಜಯನಗರ ಪೊಲೀಸ್ ಠಾಣೆಯ ಹೆಚ್.ಸಿ–5724 ಶ್ರೀ ಶ್ರೀನಿವಾಸಮೂರ್ತಿ (ಹಾಲಿ ಎ.ಎಸ್.ಐ, ಶಿವಾಜಿನಗರ ಟ್ರಾಫಿಕ್ ಪೊಲೀಸ್ ಠಾಣೆ) ರವರುಗಳ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 13–09–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.